ಚಿಂತನೆಯ ಈ ಹೊಳಹುಗಳನ್ನು ಮುಂದೊಮ್ಮೆ ಕನ್ನಡ ವಿದ್ವಾಂಸರಾದ ಡಿ.ಆರ್. ನಾಗರಾಜ್ ವಿಸ್ತರಿಸಿದರು; ಭಾರತೀಯ ಸ್ತ್ರೀವಾದದ ಎರಡು ಮೂಲ ಮಾದರಿಗಳನ್ನು ರೂಪಿಸಿದರು: 'ಕಾತ್ಯಾಯಿನಿ ಮಾದರಿಯ ಗೃಹವಾದಿನಿ ಮಾದರಿ; ಗಾರ್ಗಿ ಮಾದರಿಯ ಪ್ರಖರ ವೈಚಾರಿಕತೆ–ಪ್ರತಿಭಟನೆಯ ಮಾದರಿ. ಡಿ.ಆರ್. ನಾಗರಾಜ್ ರೂಪಿಸಿದ ಈ ಪರಿಕಲ್ಪನೆಗಳಿಂದ ಭಾರತೀಯ ಸ್ತ್ರೀವಾದದ ಬಗ್ಗೆ ಸ್ಪಷ್ಟತೆ ಪಡೆದ ಸ್ತ್ರೀವಾದಿ ವಿಮರ್ಶಕಿಯರಿದ್ದಾರೆ. ಲಕ್ನೋದ ಅಂಬೇಡ್ಕರ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಜಯಾ ಶ್ರೀವಾಸ್ತವ 'ಲೊಕೇಟಿಂಗ್ ಲೋಹಿಯಾ ಇನ್ ಫೆಮಿನಿಸ್ಟ್ ಥಿಯರಿ' ಎಂಬ ಲೇಖನದಲ್ಲಿ ಲೋಹಿಯಾ ಸ್ತ್ರೀವಾದಿ ಚಿಂತಕರೂ ಆಗಿದ್ದರೆಂಬುದನ್ನು ತೋರಿಸಿದ್ದಾರೆ.

ಗಾರ್ಗಿ, ಮೈತ್ರೇಯಿಯರತ್ತ ನೋಡುವ ಲೋಹಿಯಾ ಕಣ್ಣು ಕನ್ನಡನಾಡಿನ ವಚನಯುಗದತ್ತಲೂ ಹೊರಳುತ್ತದೆ:

'ಬೇರೆ ಕ್ಷೇತ್ರಗಳಲ್ಲಿದ್ದಂತೆ ಆಧ್ಯಾತ್ಮಿಕ ಸಮಾನತೆಯಲ್ಲೂ ಮುಂಚೂಣಿಯಲ್ಲಿರುವ ಮಹಾನ್ ಮಹಿಳೆಯೊಬ್ಬಳಿದ್ದಾಳೆ. ಆಕೆ ಕಥಾಪಾತ್ರವಾಗಿರಲಿಲ್ಲ; ಎಂಟುನೂರು ವರ್ಷಗಳ ಹಿಂದೆ ಕರ್ನಾಟಕದಲ್ಲಿದ್ದಳು; ನಗ್ನಳಾಗಿ ತಿರುಗುತ್ತಿದ್ದಳು; ಬಟ್ಟೆಯನ್ನು ಸಂಪೂರ್ಣವಾಗಿ ವರ್ಜಿಸಿದ್ದಳು. ಹರಿದ್ವಾರ ಮುಂತಾದ ಕಡೆ ನಾಗಾ ಸಾಧುಗಳಿರುವಂತೆ ಈ ಅಕ್ಕಮಹಾದೇವಿ ಕರ್ನಾಟಕದಲ್ಲಿದ್ದಳು.

'ನೀವು ಯಾವಾಗಲಾದರೂ ಲಿಂಗಾಯತ ಧರ್ಮದ ಬಗೆಗೆ ಓದಬೇಕು. ಲಿಂಗಾಯತ ಧರ್ಮದ ಪುರುಷ ಪ್ರಚಾರಕರಿದ್ದಂತೆ ಅಕ್ಕಮಹಾದೇವಿಯೂ ಇದ್ದಳು; ಆದರೆ ಆಕೆಯ ಹೆಸರು ಹೆಚ್ಚು ಹಬ್ಬಲಿಲ್ಲ. ವೈರಾಗ್ಯ, ಸಾಧುತನ, ದರ್ಶನ, ಧ್ಯಾನಗಳಲ್ಲಿ ಗಂಡಸು ಅತ್ಯುನ್ನತ ಎತ್ತರ ತಲುಪಿ ವಿರಕ್ತನಾಗುವಂತೆ, ಹೆಣ್ಣಾದ ತಾನೂ ಆ ಎತ್ತರಕ್ಕೆ ಯಾಕೆ ಏರಲು ಸಾಧ್ಯವಾಗುವುದಿಲ್ಲ ಎಂದು ಅಕ್ಕಮಹಾದೇವಿ ಪ್ರಶ್ನಿಸಿದಳು. ಇದನ್ನು ಬಯಲಾಗುವುದು ಎನ್ನಿ ಅಥವಾ ಇನ್ನಾವ ಶಬ್ದವನ್ನಾದರೂ ಬಳಸಿ; ಗಂಡಸು ಅಷ್ಟು ವಿರಕ್ತನಾದ, ಅಷ್ಟು ಎತ್ತರಕ್ಕೆ ಏರಿದ, ಬಟ್ಟೆಬರೆಗಳನ್ನು ತ್ಯಜಿಸಿದ, ಅನಾಸಕ್ತನಾದ, ನಿರ್ವಿಕಾರನಾದ ಎಂದ ಮೇಲೆ ಹೆಂಗಸು ಯಾಕೆ ಆಗಲು ಸಾಧ್ಯವಿಲ್ಲ ಎಂದು ಅಕ್ಕಮಹಾದೇವಿ ಕೇಳಿದಳು.

'ಇಂಥದೊಂದು ಶಕ್ತಿಯುತ ಚರಿತ್ರೆ ಭಾರತದಲ್ಲಿ ಸಂಭವಿಸಿದೆ. ಈಗ ನಾವಿರುವುದು ಕೊಳಕು ಕಾಲ; ಆದರೆ, ಮಧ್ಯಕಾಲೀನ ಯುಗದಲ್ಲಿ ಈ ಹೆಣ್ಣು ಬದುಕಿದ್ದಳು. ನಾನೂ ಬಟ್ಟೆ, ಬರೆಗಳನ್ನು ವರ್ಜಿಸುತ್ತೇನೆ ಅಂದಳು. ಆಕೆ ಸಾಮಾನ್ಯ ಹೆಂಗಸಾಗಿರಲಿಲ್ಲ; ಬಹು ದೊಡ್ಡ ಜ್ಞಾನಿಯಾಗಿದ್ದಳು. ಇಡೀ ಪ್ರಾಂತದಲ್ಲಿ ಬೆತ್ತಲೆ ಸಾಧುವಿನಂತೆ ತಿರುಗುತ್ತ, ಲಿಂಗಾಯತ ಧರ್ಮದ ಪ್ರಚಾರ ಮಾಡಿದಳು. ಆಕೆ ಬೆತ್ತಲಾಗಿದ್ದಳು ಎಂದರೆ ಸರಿಹೋಗುವುದಿಲ್ಲ; ವಸ್ತ್ರಗಳನ್ನು ತ್ಯಜಿಸಿದ್ದಳು ಎನ್ನುವುದೇ ಸರಿ.'

* * *

ಪುರಾಣ ಕಾಲದಿಂದಲೂ ಭಾರತೀಯ ಸಮಾಜದಲ್ಲಿ ಬೇರು ಬಿಟ್ಟಿರುವ ಸ್ತ್ರೀ ಅಧೀನತೆ ಈ ಕಾಲದಲ್ಲೂ ಮುಂದುವರಿದಿರುವುದನ್ನು ಲೋಹಿಯಾ ಮತ್ತೆ ಮತ್ತೆ ಪ್ರಸ್ತಾಪಿಸುತ್ತಿದ್ದರು:

'ಹೆಣ್ಣು ಸುಂದರವಾಗಿರಬೇಕು, ಬುದ್ಧಿವಂತಳಾಗಿರಬೇಕು, ಚುರುಕಾಗಿರಬೇಕು, ತೀಕ್ಷ್ಣಮತಿಯಾಗಿರಬೇಕು, ತನ್ನವಳಾಗಿರಬೇಕು, ತನ್ನ ಅಧೀನದಲ್ಲೇ ಇರಬೇಕು ಎಂದೇ ಗಂಡಸು ಬಯಸುತ್ತಾನೆ. ಈ ಎರಡೂ ಭಾವನೆಗಳು ಪರಸ್ಪರ ವಿರೋಧವಾದವುಗಳೇ' ಎನ್ನುತ್ತಾ ಲೋಹಿಯಾ ಗಂಡಿಗೆ ಪ್ರಶ್ನೆಗಳ ಸುರಿಮಳೆಗರೆಯುತ್ತಾರೆ:

'ಯಾರನ್ನು ನೀನು ನಿನ್ನವಳನ್ನಾಗಿ ಮಾಡಿಕೊಳ್ಳಬಲ್ಲೆ? ಯಾರನ್ನು ನೀನು ನಿನ್ನ ನಿಯಂತ್ರಣದಲ್ಲಿಟ್ಟುಕೊಳ್ಳಬಲ್ಲೆ? ಮೇಜನ್ನು, ಕೋಣೆಯನ್ನು, ಸ್ವಲ್ಪಮಟ್ಟಿಗೆ ನಾಯಿಯನ್ನು ನಿನ್ನ ವಶದಲ್ಲಿ ಇಟ್ಟುಕೊಳ್ಳಬಹುದು. ಬೆಕ್ಕನ್ನು ಇಟ್ಟುಕೊಳ್ಳುವುದೂ ಕಷ್ಟ. ಅಂದರೆ ನಿರ್ಜೀವವಾದದ್ದನ್ನು, ಅಥವಾ ಸಜೀವವಾಗಿದ್ದೂ ಪೂರ್ಣ ಜೀವಂತಿಕೆ ಇಲ್ಲದಿರುವಂಥದನ್ನು, ನೀನು ನಿನ್ನ ವಶದಲ್ಲಿಟ್ಟುಕೊಳ್ಳಲು ಸಾಧ್ಯ. ಆದರೆ ಜೀವಂತ ಚೈತನ್ಯವುಳ್ಳದ್ದನ್ನು, ಹೃದಯವಂತರನ್ನು, ತೀಕ್ಷ್ಣಮತಿಗಳನ್ನು ಅಧೀನದಲ್ಲಿ ಇಟ್ಟುಕೊಳ್ಳಲಾಗುವುದಿಲ್ಲ.'

ಈ ಥರದ ವಿಚಾರಗಳನ್ನು ಲೋಹಿಯಾ ಸಮಾಜವಾದಿ ಪಕ್ಷದ ಕಾರ್ಯಕರ್ತರಲ್ಲಿ ಬಿತ್ತುತ್ತಾ ಸಮಾನತೆಯ ರಾಜಕಾರಣದತ್ತ ಕರೆದೊಯ್ಯುತ್ತಿದ್ದರು:

'ಹೆಂಗಸರು ಆರ್ಥಿಕವಾಗಿ ಸ್ವತಂತ್ರರಾಗಬೇಕು. ಹೆಂಗಸರು ಮತ್ತು ಗಂಡಸರಿಗೆ ಸಮಾನ ವೇತನ ಕೊಡಬೇಕು; ಕೆಲಸದಲ್ಲಿ ಸಮಾನತೆ ಇರುವಂತೆ ಕೂಲಿಯಲ್ಲೂ ಸಮಾನತೆಯಿರಬೇಕು. ಈ ಎಲ್ಲ ವಿಚಾರಗಳೂ ಸಮಾಜವಾದಿ ಪಕ್ಷದ ಕಾರ್ಯಕ್ರಮದ ಅಂಶಗಳಾಗಬೇಕು.'

ಮಹಿಳೆಯರು ಬಹುಸಂಖ್ಯೆಯಲ್ಲಿ ಭಾಗಿಯಾಗದ ರಾಜಕೀಯ ಪಕ್ಷಗಳು, ಸಂಘಟನೆಗಳು ಅಪೂರ್ಣ ಎಂದು ನಂಬಿದ್ದ ಲೋಹಿಯಾರ ಈ ಚರ್ಚೆಗಳು ಹೋಟೆಲ್ ಟೇಬಲ್ಲುಗಳಲ್ಲೂ ನಡೆಯುತ್ತಿದ್ದವು. 'ಹೆವಿ ಟೀ ಡ್ರಿಂಕರ್' ಎನ್ನಿಸಿಕೊಂಡಿದ್ದ ಲೋಹಿಯಾ ಚಹಾದ ಮೇಲೆ ಚಹಾ ಕುಡಿಯುತ್ತಾ ಭಾಗಿಯಾಗುತ್ತಿದ್ದ ಈ ಚರ್ಚೆಗಳಲ್ಲಿ ಹೋಟೆಲ್ಲಿನ ಸರ್ವರ್‌ಗಳೂ ಸೇರಿಕೊಳ್ಳುತ್ತಿದ್ದರು. ಇಂಥದೊಂದು ಚರ್ಚೆಯನ್ನು ಲೋಹಿಯಾ ನೆನಸಿಕೊಳ್ಳುತ್ತಾರೆ:

'ಒಮ್ಮೆ ಕಾಫಿ ಹೌಸೊಂದರಲ್ಲಿ ಕೂತು ಕೆಲವರ ಜೊತೆ ಹರಟುತ್ತಿದ್ದೆ. 'ಇಂಥ ಕಾಫಿ ಟೇಬಲ್ ಮಾತುಕತೆಗಳೇ ಫ್ರೆಂಚ್ ಕ್ರಾಂತಿಯನ್ನು ಬೆಳೆಸಿದವು' ಎಂದು ಅವರಲ್ಲೊಬ್ಬ ಹೇಳಿದ. ನನಗೆ ಸಿಟ್ಟಿನಿಂದ ಮೈ ಉರಿಯತೊಡಗಿತು. ಅಲ್ಲಿ ನೋಡಿದರೆ ನಮ್ಮ ಜೊತೆ ಒಬ್ಬ ಶೂದ್ರನಾಗಲೀ, ಹೆಣ್ಣುಮಗಳಾಗಲೀ ಇರಲಿಲ್ಲ. ಇಂಥ ನಿರ್ಜೀವ ಗುಂಪಿನಲ್ಲಿದ್ದ ನಮ್ಮಂಥ ಗೊಡ್ಡು ಜನರೆಲ್ಲ ನಿನ್ನೆಯ ಮೇವನ್ನು ಸುಮ್ಮನೆ ಮೆಲುಕು ಹಾಕುತ್ತಿದ್ದ ದನಗಳಂತಿದ್ದೆವು.'

ಇಂಥ ಸ್ಥಿತಿ ಭಾರತದ ರಾಜಕೀಯ ಪಕ್ಷಗಳಲ್ಲಿ ವ್ಯಾಪಕವಾಗಿರುವುದನ್ನು ಲೋಹಿಯಾ ಎತ್ತಿ ಹೇಳುತ್ತಿದ್ದರು:

'ಈ ದೇಶದಲ್ಲಿ ಕಮ್ಯುನಿಸ್ಟ್, ಕಾಂಗ್ರೆಸ್ ಹಾಗೂ ಸಮಾಜವಾದಿ ರಾಜಕಾರಣದಿಂದ ಹಿಡಿದು ಎಲ್ಲ ಬಗೆಯ ರಾಜಕಾರಣದಲ್ಲೂ ಉದ್ದೇಶಪೂರ್ವಕವಾಗಿಯೋ, ರೂಢಿಗತವಾಗಿಯೋ ಒಂದು ವಿಷಯ ಕುರಿತು ಮಾತ್ರ ರಾಷ್ಟ್ರೀಯ ಸಹಮತವಿದೆ. ಅದೇನೆಂದರೆ, ಇಡೀ ಜನಸಂಖ್ಯೆಯ ಮುಕ್ಕಾಲು ಭಾಗದಷ್ಟಿರುವ ಶೂದ್ರರನ್ನೂ, ದಲಿತರನ್ನೂ, ಸ್ತ್ರೀಯರನ್ನೂ ತುಳಿಯುವುದು ಹಾಗೂ ಅವರನ್ನು ರಾಜಕೀಯದಿಂದ ದೂರ ಇಡುವುದು.'

ಸಮಾಜದ ಸ್ಥಿತಿಯನ್ನು ಬದಲಿಸದೆ ರಾಜಕೀಯ ಸ್ಥಿತಿ ಬದಲಾಗದು ಎಂದು ಮನಗಂಡಿದ್ದ ಲೋಹಿಯಾ ಈ ವಿಚಾರಗಳನ್ನು ಪಕ್ಷದ ಕಾರ್ಯಕರ್ತರಿಗೆ ಮನವರಿಕೆ ಮಾಡಿಕೊಡುತ್ತಿದ್ದರು:

'ಭಾರತೀಯ ಹೆಣ್ಣಿನ ಸ್ಥಿತಿ ಶೋಚನೀಯವಾಗಿದೆ. ಅವಳ ಅಡುಗೆಮನೆಯ ಗುಲಾಮಗಿರಿಯ ಜೊತೆಗೆ, ಒಲೆಯ ಉಸಿರು ಕಟ್ಟಿಸುವ ಹೊಗೆಯೂ ಸೇರಿಕೊಂಡು ಪರಿಸ್ಥಿತಿ ಕರುಣಾಜನಕವಾಗಿದೆ. ಅವಳಿಗೂ ಅಡುಗೆ, ಊಟಕ್ಕೆ ನಿಗದಿಯಾದ ವೇಳಾಪಟ್ಟಿಯೊಂದಿರಬೇಕು. ಅಡುಗೆಮನೆಯಲ್ಲಿ ಹೊಗೆ ಸಲೀಸಾಗಿ ಹೋಗುವ ಚಿಮಣಿಯಿರಬೇಕು. ಅರೆ ಹೊಟ್ಟೆ, ನಿರುದ್ಯೋಗ ಹಾಗೂ ಅನ್ಯಾಯಗಳ ವಿರುದ್ಧದ ಹೋರಾಟದಲ್ಲಿ ಅವಳೂ ಪಾಲ್ಗೊಳ್ಳಬೇಕು.'

ಚಿಂತಕಿಯರು ಈ ಕುರಿತು ಹೆಚ್ಚು ಮಾತಾಡಬೇಕೆಂದು ಲೋಹಿಯಾ ಒತ್ತಾಯಿಸುತ್ತಿದ್ದರು. ಶಾಂತಿನಾಯಕ್, ಇಂದುಮತಿ ಕೇಳ್ಕರ್, ತಾರಕೇಶ್ವರಿ ಸಿನ್ಹ ಥರದ ಕ್ರಿಯಾಶಾಲಿ ಚಿಂತಕಿಯರು ಲೋಹಿಯಾ ಸಂಗದಲ್ಲೂ ರೂಪುಗೊಂಡರು. ಎಲ್ಲೆಡೆಯಲ್ಲೂ ಮಹಿಳೆಯರಿಗೆ ಆದ್ಯತಾ ಅವಕಾಶ ಕೊಡಲೇಬೇಕೆಂದು ಹೇಳುತ್ತಿದ್ದ ಲೋಹಿಯಾ, ಮಹತ್ವದ ಸಮ್ಮೇಳನವೊಂದರಲ್ಲಿ ಆ ಕಾಲದ ಪ್ರಮುಖ ಚಿಂತಕಿ ಶಕುಂತಲಾ ಶ್ರೀವಾಸ್ತವ ವೇದಿಕೆಗೆ ಬರಬೇಕೆಂದು ಕೇಳಿಕೊಂಡರು. ಆಕೆ ಬರಲೊಪ್ಪಲಿಲ್ಲ.

ಈ ಪ್ರಸಂಗ ಕುರಿತು ಲೋಹಿಯಾ ಬರೆಯುತ್ತಾರೆ: 'ಅದಕ್ಕೇನು ಮಾಡಬೇಕೆಂದು ನನಗೆ ಗೊತ್ತಿತ್ತು! ರಟ್ಟೆ ಹಿಡಿದು ಎಳೆದುಕೊಂಡು ಹೋಗುತ್ತೇನೆ ಎಂದು ನಾನು ಬೆದರಿಕೆ ಹಾಕಿದ ಮೇಲೆಯೇ ಆಕೆ ಕೊಂಚ ಮೆದುವಾಗಿದ್ದು ಹಾಗೂ ಗ್ಯಾಲರಿಯಿಂದ ವೇದಿಕೆಗೆ ಬಂದದ್ದು!'

ಭಾರತದಲ್ಲಿ ನೈತಿಕತೆ–ಅನೈತಿಕತೆಯ ಪ್ರಶ್ನೆಗಳೆಲ್ಲ ಸ್ತ್ರೀಯರ ಸುತ್ತಲೇ ಸುತ್ತುವುದನ್ನು ಲೋಹಿಯಾ ಕಟುವಾಗಿ ವಿಮರ್ಶಿಸಿದರು. ಹೊಸ ನೈತಿಕತೆಯ ಅಗತ್ಯವನ್ನು ವಿವರಿಸಿದರು:

'ಪ್ರತಿಯೊಂದು ಯುಗವೂ, ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ನಿರ್ದಿಷ್ಟ ನೈತಿಕತೆಯನ್ನು